**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

**<u>ಸ್ಪೆಷಲ್ ಕೇಸ್ ನಂಃ 78/2022</u>** <u>ಪಿ.ಡಬ್ಲ್ಯೂ 5</u>

<u>ಸಿ.ಡಬ್ಲ್ಯೂ.5</u>

| | |
|---|---|
| ಸಾಕ್ಷಿದಾರರ ಹೆಸರು | ಪ್ರಜ್ವಲ್ |
| ತಂದೆಯ ಹೆಸರು | ಪ್ರಭಾಕರ |
| ವಯಸ್ಸು | 25 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಿಳಾಸ | ತೋನ್ಸೆ, ಗುಜ್ಜರಬೆಟ್ಟು |

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನನಗೆ ಚಾಸಾ-1 ರಿಂದ 4 ಗೊತ್ತು. ತಾರೀಕು 06-05-2022 ರಂದು ಕೆಂಜೂರಿನ ದೇವಸ್ಥಾನದ ಗದ್ದೆಯ ಬಳಿ ಪೊಲೀಸರು ಬಂದಿದ್ದರು, ಆಗ ಚಾಸಾ-2 ಮತ್ತು ಇನ್ನೊಬ್ಬ ಸಾಕ್ಷಿದಾರರು ಇದ್ದರು. ಅಲ್ಲಿ ಗಲಾಟೆಯಾಗಿದ್ದಕ್ಕಾಗಿ ಪೊಲೀಸರು ಮಹಜರು ಮಾಡಲು ಬಂದಿದ್ದರು. ಅಲ್ಲಿ ಚಾಸಾ-2 ಪೊಲೀಸರಿಗೆ ಜಾಗೆ ತೋರಿಸಿದ್ದ. ಅದಕ್ಕಾಗಿ ಪೊಲೀಸರು 10.00 ರಿಂದ 11.00 ಗಂಟೆಯ ಸಮಯದಲ್ಲಿ ಮಹಜರನ್ನು ಮಾಡಿದ್ದರು. ನನಗೆ ಈಗ ತೋರಿಸಿದ ನಿಶಾನೆ ಪಿ-2 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಈಗಾಗಲೇ ನಿಶಾನೆ ಪಿ-2(ಸಿ) ಆಗಿದೆ. ಅದನ್ನು ಪಂಚನಾಮೆ ಮಾಡಿದ ಜಾಗೆಯಲ್ಲಿ ಹಾಕಿದ್ದೆ. ಆ ಸಮಯದಲ್ಲಿ ನಿಪಿ-3 ರ ಪೋಟೋಗಳನ್ನು ಸಹ ತೆಗೆದಿದ್ದರು.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅವಕಾಶ ಕೊರಿದ್ದು ಸರಕಾರಿ ಅಭಿಯೋಜಕರಿಗೆ ಪಾಟೀಸವಾಲಿಗೆ ಅನುಮತಿ ಕೊಡಲಾಯಿತು)**

**<u>ಪಾಟಿಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

1) ಪೊಲೀಸರು ಪಂಚನಾಮೆಗಾಗಿ ಬಂದಿದ್ದ ತಾರೀಕು 16-05-2022 ಎಂದರೆ ಸರಿ. ಸಾಕ್ಷಿದಾರರು ಅನೇಕ ವರ್ಷ ಕಳೆದಿದ್ದರಿಂದ 06 ಮತ್ತು 16 ರ ಬಗ್ಗೆ ವ್ಯತ್ಯಾಸ ಆಗಿರುವುದಾಗಿ ಹೇಳಿದ್ದಾರೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್. ಎಸ್.ಎನ್. ವಕೀಲರಿಂದ**

1) ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ. ನಿಶಾನೆ ಪಿ-2ರ ಗದ್ದೆ ದೇವಸ್ಥಾನದಿಂದ ಎದುರಿನಲ್ಲಿಯೇ ಇದೆ, ಅದು ದೇವಸ್ಥಾನದಿಂದ ಸುಮಾರು 100 ಹೆಜ್ಜೆಗಳ ಅಂತರದಲ್ಲಿದೆ. ನಿಪಿ-2ರ ಜಾಗೆಯಿಂದ ದೇವಸ್ಥಾನ ಪಶ್ಚಿಮ ದಿಕ್ಕಿನಲ್ಲಿ ಇದೆ. ನಿಪಿ-2ರ ಜಾಗೆ ನಾನು ಹೇಳಿದಂತಹ ದಿಕ್ಕು ಮತ್ತು ಅಂತರದಲ್ಲಿ ಇಲ್ಲ ಎಂದರೆ ಸರಿಯಲ್ಲ. ದೇವಸ್ಥಾನದ ಜಾತ್ರೆ 12ನೇ ತಾರೀಕಿನಿಂದ 18ನೇ ತಾರೀಕಿನವರೆಗೆ ನಡೆದಿತ್ತು ಎಂದರೆ ನಿಜ. ನಿಪಿ-2ನ್ನು ಬರೆದ ಸಮಯದಲ್ಲಿ ಅಲ್ಲಿ ಅಂಗಡಿಗಳು, ಮತ್ತು ಸಾರ್ವಜನಿಕರು ಸಹ ಇದ್ದರು. ನಮ್ಮ ಸಮಕ್ಷಮ ಪೊಲೀಸರು ಅಲ್ಲಿದ್ದ ಸಾರ್ವಜನಿಕರನ್ನಾಗಲೀ, ಅಂಗಡಿಯವರನ್ನಾಗಲೀ ವಿಚಾರಿಸಿಲ್ಲ.

2) ನಾವು ಅಲ್ಲಿಗೆ ಹೋಗುವ ಮೊದಲೇ ಪೊಲೀಸರು ಅಲ್ಲಿಗೆ ಬಂದಿದ್ದರು. ಮತ್ತು ಅವರು ದಾಖಲೆಗಳನ್ನು ತಯಾರಿಸಿದ್ದರು. ನಾನು ತಾರೀಕು 06ರಂದೇ ಆಗಲೀ, 16ರಂದೇ ಆಗಲೀ, ನಿಪಿ-2ರ ಜಾಗೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-2ರ ದಾಖಲೆಗೆ ನಾನು ಬ್ರಹ್ಮಾವರ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-2ರಲ್ಲಿ ಹೇಳಿದ ಸಮಯದಲ್ಲಿ ಪೊಲೀಸರು ಆ ಜಾಗೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-3ರ ಪೋಟೋವನ್ನು ಠಾಣೆಯ ಬಳಿ ತೆಗೆದಿತ್ತು ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-2ರ ಜಾಗೆಗೆ ಹೋಗಿಲ್ಲ ಮತ್ತು ಅಲ್ಲಿ ಯಾವುದೇ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

-ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ /ವಿಶೇಷ ನ್ಯಾಯಾಧೀಶರು,
ಉಡುಪಿ.

**ಪಿ.ಡಬ್ಲ್ಯೂ.5/ಸಿ.ಡಬ್ಲ್ಯೂ.5**